ಸಿ.ಸಿ .ನಂ. 120/2022 ಪಿಡಬ್ಲೂಃ 1

ದಿನಾಂಕಃ 12-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

10. ಫಿರ್ಯಾದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ ನೋಟಿಸಿನಲ್ಲಿರುವ ವಿಚಾರಗಳನ್ನು ನಾನು ಓದಿಕೊಂಡಿದ್ದೇನೆ. ಅವೆಲ್ಲಾ ಸರಿಯಾಗಿವೆ . ಮೊದಲಿನ ಪಾಟೀ ಸವಾಲಿನಲ್ಲಿ ಚೆಕ್ ಮೊತ್ತ ಮತ್ತು ಚೆಕ್ ನಂಬರವನ್ನು ಆರೋಪಿ ಅಗ್ರಿಮೆಂಟ್ ನಲ್ಲಿ ಬರೆಸಿದ್ದರು ಎಂದು ಹೇಳಿರುವ ಹೇಳಿಕೆಗೆ ನಾನು ಈಗಲೂ ಬದ್ಧನಾಗಿದ್ದೇನೆ ಎಂದರೆ ಸರಿ . ಅಗ್ರಿಮೆಂಟ್ ಮಾಡುವ ಸಮಯದಲ್ಲಿ ಬೋಟ್ ಕೆಲಸಕ್ಕೆ ಹೋದಾಗ ಆರೋಪಿ ಚೆಕ್ ನ್ನು ಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ .

11. ನಾನು ಭಾಗಿರಥಿ ಅಂಬಿಗ ಎಂಬುವವರ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಕುಮಟಾದಲ್ಲಿ ಸಿಸಿ ನಂ . 2306/2024 ದಾಖಲಿಸಿದ್ದೇನೆ ಎಂದರೆ ಸರಿ . ಆ ಪ್ರಕರಣದ ಪಾಟೀ ಸವಾಲಿನಲ್ಲಿ ಈಶ್ವರ ರಾಮಾ ಅಂಬಿಗ ಇತನ ಪ್ರಕರಣದಲ್ಲಿ ನಾಲ್ಕು ಜನರು ಸೇರಿ ನನ್ನ ಬಳಿ ಹಣವನ್ನು ತೆಗೆದುಕೊಂಡಿದ್ದು ಒಬ್ಬನ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ವಕೀಲರು ಕೇಳಿದ್ದಕ್ಕೆ ನಾನು ಹೇಳಿದ್ದೇನೆ ಎಂದು ನುಡಿದಿರುತ್ತಾರೆ . ಸದರಿ ಪ್ರಕರಣದಲ್ಲಿ ನನ್ನ ಸ್ವಂತ ಹಣ ಹೋಗಿರುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಭಾಗಿರಥಿ ಕೇಸಿನಲ್ಲಿ ನನ್ನ ಹಣ ಹೋಗಿದೆ , ಈ ಪ್ರಕರಣದಲ್ಲಿ ನಮ್ಮ ಮಾಲೀಕರ ಹಣ ಹೋಗಿದೆ ಎಂದು ನುಡಿದಿರುತ್ತಾರೆ . ನಮ್ಮ ಮಾಲೀಕರ ಹಣ ಹೋಗಿದ್ದ ಬಗ್ಗೆ ದಾಖಲಾತಿ ಆರೋಪಿಯ ಬಳಿ ಇದೆ , ಅದರ ಜರೆಕ್ಸ ಪ್ರತಿಯನ್ನು ನಾನು ಹಾಜರು ಪಡಿಸಿದ್ದೇನೆ . ಸಾಕ್ಷಿಗೆ ಕಡತದಲ್ಲಿರುವ ದಾಖಲಾತಿಗಳನ್ನು ತೋರಿಸಲಾಗಿ ಸಾಕ್ಷಿ ಆರೋಪಿತ ವಕೀಲರಿಗೆ ನನಗೆ ಓದಲು ಬರುವುದಿಲ್ಲ ನೀವೇ ಓದಿ ಹೇಳಿ ಎಂದು ಹೇಳಿರುತ್ತಾರೆ . ಸಾಕ್ಷಿಗೆ ಕಡತದಲ್ಲಿರುವ

ದಾಖಲಾತಿಗಳನ್ನು ತೋರಿಸಲಾಗಿ ಗೋವಾದಲ್ಲಿ ಆಗಿರುವ ಅಗ್ರಿಮೆಂಟ್ ಹಾಜರು ಪಡಿಸಿದ್ದೇನೆ ಎಂದು ನುಡಿದಿರುತ್ತಾರೆ.

12. ನನ್ನ ವಿರುದ್ಧ ಕುಮಟಾ ನ್ಯಾಯಾಲಯದಲ್ಲಿ ಅಮಲ ಜಾರಿ ಪ್ರಕರಣ ನಂ. 145/2019 ದಾಖಲಾಗಿತ್ತು ಎಂದರೆ ಸರಿ. ನನ್ನ ವಿರುದ್ಧ ಸಿಸಿ ನಂ. 503/2017 ದಾಖಲಾಗಿದೆ ಎಂದರೆ ಸಾಕ್ಷಿ ಅದು ರಾಜಿಯಾಗಿ ಮುಕ್ತಾಯಗೊಂಡಿದೆ ಎಂದು ನುಡಿದಿರುತ್ತಾರೆ. ನನ್ನದು ಸ್ವಂತದ್ದು ಮನೆ ಇದೆ. ನಾವು ಒಟ್ಟೂ ನಾಲ್ಕು ಜನ ಅಣ್ಣ, ತಮ್ಮಂದಿರರು, ಅಕ್ಕ ತಂಗಿಯವರು. ಮನೆಯಲ್ಲಿ ನಮ್ಮ ನಾಲ್ಕು ಜನರಿಗೆ ಪಾಲಿದೆ ಎಂದರೆ ಸರಿ. ನನ್ನ ಹಾಗೂ ನನ್ನ ತಮ್ಮನ ವಿರುದ್ಧ ಸಿಂಡಿಕೇಟ್ ಬ್ಯಾಂಕನವರು ಬಂಗಾರದ ಅಡದ ಬಗ್ಗೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ಬ್ಯಾಂಕ ಹಣವನ್ನು ಚುಕ್ತಾ ಮಾಡಿದ್ದೇವೆ. ಈ ಪ್ರಕರಣದಲ್ಲಿ ನನ್ನ ವೈಯಕ್ತಿಕ ನಾತೆಯಿಂದ ಹಣ ಹೋಗಿಲ್ಲ ಎಂದರೆ ಸಾಕ್ಷಿ ನಾನು ಲೇಬರ ಕರೆದುಕೊಂಡು ಹೋಗಿ ಹಣ ತೀರಿಸಿ ಬಂದಿದ್ದೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ಫಿರ್ಯಾದಿನಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಮೊದಲಿನ ಪಾಟೀ ಸವಾಲಿನಲ್ಲಿ ಹೇಳಿದ್ದೇನೆ ಎಂದು ನುಡಿದಿರುತ್ತಾರೆ. ರೀನಾ ಡೊಮಿಂಗೋ ರೊಡ್ರಿಗಸ್ ಹಾಗೂ ಶ್ರೀ ಡೊಮಿಂಗೋ ರೊಡ್ರಿಗಿಸ್ ಇವರಿಗೆ ಯಾವುದೇ ಹಣ ಸಂದಾಯವಾಗಬೇಕಾಗಿಲ್ಲ ನಾನು ಕೆಲಸ ಮಾಡಿ ಬಂದಿದ್ದೇನೆ. ಹಣ ಸಂದಾಯವಾಗಿದೆ ಎಂದು ಬರೆಸಿಕೊಡಲು ಆಗುವುದಿಲ್ಲ, ಅವರು ಬರೆಯುದಿಲ್ಲ. ರೀನಾ ಡೊಮಿಂಗೋ ರೊಡ್ರಿಗಸ್ ಹಾಗೂಶ್ರೀ ಡೊಮಿಂಗೋ ರೊಡ್ರಿಗಿಸ್ ಅವರಿಂದ ಹಣ ತಗೆದುಕೊಂಡ ಬಗ್ಗೆ ಹಾಗೂ ಅವರಿಗೆ ಹಣ ನೀಡಿದ ಬಗ್ಗೆ ಅವರ ಸಾಕ್ಷಿ ವಿಚಾರಣೆ ಮಾಡಿಸಲು ಆಗುವುದಿಲ್ಲ, 7 ವರ್ಷಗಳಾಗಿವೆ ಅವರ ಬೋಟ್ ಮುಳುಗಡೆ ಆಗಿ ಹೋಗಿದೆ. ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲ. ಆರೋಪಿಯನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೀನಾ

ಪಿಡಬ್ಲೂಃ 1

ಡೊಮಿಂಗೋ ರೊಡ್ರಿಗಸ್ ಹಾಗೂಶ್ರೀ ಡೊಮಿಂಗೋ ರೊಡ್ರಿಗಿಸ್ ಇವರ ಬೋಟ್ ಮುಳುಗಿ ಹೋಗಿ ಎರಡು ವರ್ಷಗಳಾಗಿವೆ . ನಾನು ಈಗ ಸಾಲ ತೀರಿಸಿ ಬಂದ ನಂತರ ಅವರೊಟ್ಟಿಗೆ ಕೆಲಸ ಮಾಡಲು ಗೋವಾಗೆ ಹೋಗಿಲ್ಲ. ನಾನು 2021 ನೇ ಇಸ್ವಿಯಲ್ಲಿ ಸಾಲವನ್ನು ತೀರಿಸಿರುತ್ತೇನೆ . ಜನರನ್ನು ನಾನೇ ಕರೆದುಕೊಂಡು ಹೋಗಿದ್ದೆ . ಜನರನ್ನು ಕರೆದುಕೊಂಡು ಹೋಗಿದ್ದಕ್ಕೆ ಅವರೊಂದಿಗೆ ಕರಾರು ಮಾಡಿಕೊಂಡಿಲ್ಲ , ಅವರಿಗೆ ಕೂಲಿ ಪೆಮೆಂಟ್ ಇರುತ್ತದೆ . ಕೂಲಿಗಾರರು ಕಲೂಡ ನಾನು ಸಾಲ ತೀರಿಸಿದ್ದಕ್ಕೆ ಸಾಕ್ಷಿದಾರರು ಎಂದರೆ ಸರಿ . ಅವರ ಹೆಸರು ಈಗ ಗೊತ್ತಿಲ್ಲ. ಈಗ ಅವರ ಸಾಕ್ಷಿ ವಿಚಾರಣೆ ಮಾಡಿಸಲು ಆಗುವುದಿಲ್ಲ . 7 ವರ್ಷ ಆಯಿತು ಈಗ ಸಾಕ್ಷಿ ಮಾಡಿಸಲು ಆಗುವುದಿಲ್ಲ . ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಕತೆಯನ್ನು ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ.

13. ನಿಪಿ-1 ಚೆಕ್ ನ್ನು ಆರೋಪಿ ನೀಡಿಯೇ ಇಲ್ಲ. ನಾವೇ ಅದನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ನ್ನು ಆರೋಪಿ ಇಂಗ್ಲೀಷ ಭಾಷೆಯಲ್ಲಿ ಬರೆಸಿಕೊಟ್ಟಿರುತ್ತಾರೆ . ನಿಪಿ-1 ನ್ನು ಆರೋಪಿ ನೀಡಿಲ್ಲ. ಆರೋಪಿಯನ್ನು ಸುಮ್ಮನೇ ನ್ಯಾಯಾಲಯಕ್ಕೆ ಅಲೆದಾಡಿಸುತ್ತಿದ್ದೇವೆ . ನಾನೇ ಆರೋಪಿಗೆ ಪರಿಹಾರವನ್ನು ಕೊಡಬೇಕು ಎಂದರೆ ಸರಿಯಲ್ಲ . ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.